ಸಾಮಾಜಿಕ ತಾಣ ಪಯಣ

ನಿಂದೇನೈತಿ?

ಮುಚ್ಚುವ ಮಾನದ
ಹತ್ತಿಯ ಬಟ್ಟೆಯ
ಮೂಲವು ನೀನಾ?

ತಿನ್ನುವ ಅನ್ನದ
ಅಕ್ಕಿಯ ಪೈರಿನ
ಪ್ರಾರಂಭ ನೀನಾ?

ದಾಹವ ತೀರಿಸೋ
ಜಲದ ಸ್ಫುಯು ನೀನಾ?
ಜೀವವು ನಿಂತಿರೋ
ಬೀಸುವ ಗಾಳಿಯು ನೀನಾ?

ಕಣ್ಣಿಗೆ ಕಾಣುವ
ಸ್ಫುಯ ನೋಡುವ
ಬೆಳಕಿನ ಕರ್ತೃ ನೀನಾ?
ಜಗದ ಭಾರವ ಹೊತ್ತಿರೋ
ಭೂಯು ನೀನಾ?

ನಾನು ನಂದು ಅಂತಿ
ಇಲ್ಲಿ ನಿಂದೇನೈತಿ?
ನಂದು ನಂದು ಅಂತಿ
ಇಲ್ಲಿ ನಿಂದೇನೈತಿ?

ಆಡುವ ಭಾಷೆಯು ನೀನಾ?
ಬರೆಯುವ ಅಕ್ಷರ ನೀನಾ?
ನಿನಗಿರುವ ಹೆಸರು ನಿಂದಾ?
ಹೆಸರಿರುವ ಜೀವಕೆ ಉಸಿರು ನಿಂದಾ?

ಇಲ್ಲಿ ನೀನು ನಾನು ಅಂತೇನಿಲ್ಲ
ಎಲ್ಲವು ಇಲ್ಲಿ ಏನು ಇಲ್ಲ!
ನಾನು ನಂದು ಅಂತಿ
ಇಲ್ಲಿ ನಿಂದೇನೈತಿ..?

● ದೇವೀಂದ್ರ ಹುಲಕಲ್(ಜೆ)

ಅಂಬಲೂರಿನ ಅರಸಿ

ಅವಳೆದೆಯ ಅಂತರಂಗ
ಅರಿಯದೆಲೆ ದೂರ ಮಾಡಿದೆನೇಕೆ।
ಸವಿಮಾತ ಶ್ರೀದೇವಿಯ
ನಿಜದನಿ ಕಡೆಗೂ ಅರ್ಥವಾಗಲಿಲ್ಲೇಕೆ।।

ಅಂಬಲೂರಿನ ಅರಸಿ
ಕಷ್ಟಗಳ ಕಾಣದಾಕೆ ಇಷ್ಟೊಂದು ನೋವೆ।
ನಂಬಿ ಬಂದವಳ ಒಳಗನಸು
ತೂರಿ ಮುನ್ನಡೆದೆ ದು:ಖಕ್ಕೆ ದಾರಿ ನಾವೇ।

ಇರುವ ಸಿರಿ ಸುಖವ ಅನುಭವಿಸೊ
ಸೌಭಾಗ್ಯವ ದೂರ ದೂಡಿದೆನೆ ನಾನಿಂದು।
ಬರುವ ಸ್ನೇಹ ಮಧುರ ಕ್ಷಣಗಳ
ಅವಳ ಮನದಿಂದ ಕಿತ್ತುಕೊಂಡೆನೆಂದು।

ಅಗಸಿ ಬಾವಿಯ ಮನೆಯವಳು
ಅವರಪ್ಪ ಆ ಊರ ಅರಸನಂತಿಹನು।
ಬಗಸಿ ಬಯಸಿದ ಚೆಲುವೆ
ಒಲಿದು ಬಂದರೂ ಮೂರ್ಖನಾಗಿಹೆನು।

ಚಂದ್ರ ಚುಕ್ಕಿ ತಾರೆಗಳ ಹೊಳಪು
ಅವಳಿಗಿಲ್ಲಿ ಅವಳೆ ಸಾಟಿಯು ಜಗದಲಿ।
ಚಂದುಳ್ಳೆ ಒಲವಿನ ಮನಕೆ
ನಿರಾಸೆ ಕಹಿಗೋಪುರವಾದೆನೆ ನಾನಿಲ್ಲಿ।

● ಎಚ್.ಬಿ.ಕಂಬಳಿ

ಹೊಸ ಭಾವಲಾಸ್ಯ

ತಾಳ ತಪ್ಪದ ಮೌನರಾಗಕೆ
ಮನವು ಮೂಕಭಾವ ತಳೆದಿದೆ!
ಕುಳಿರ್ಗಾಳಿಯ ದಾಳಿಯಲೂ...
ಚಿಗುರಿದೆಲೆಗಳು ನಗುತಿವೆ!

ಬತ್ತಿದೆದೆಯಲಿ ಹೊಸ ಕನಸು
ಗರಿಗೆದರಿ ಚೈತನ್ಯವು ಮೂಡಿದೆ!
ರೆಂಬೆಕೊಂಬೆಗಳಲಿ
ನಂಬಿಕೆಯುಕ್ಕಿಸಿ..
ಹಚ್ಚಹಸಿರು ತಾ ನಲಿದಿದೆ!

ದಿಕ್ಕು ತಪ್ಪಿಸುವ ಕತ್ತಲೆಯಲಿ
ನಂದದ ಬೆಳಕು ಉಳಿಯಲಿ!
ಅವನೆಣಿಸಿದಾಗ ಪಯಣ
ನಿಲುವುದು..
ಜಡ ಬದುಕಿನ ನಿಲ್ದಾಣದಲಿ!

ವಿಸ್ತರಿಸಿದ ಅಂಬರದ ಕ್ಷಿತಿಜದೊಳು
ಮುಚ್ಚಿದ ಕಂಗಳಲಿ ಅಡಗಿದೆ ಬೆಳಕು!
ಸತ್ಯದ ನಿಲುವಿಗೆ ನಿಜದೊಳು..
ಮನತೆರೆದು ನೋಡಲು ನಲ್ಮೆಯ
ಬದುಕು!

● ಸುಮನಾ ರಮಾನಂದ, ಹುಬ್ಬಳ್ಳಿ

ಕಾರ್ಟೂನ್

ಕಾಂಗ್ರೆಸ್ ಪ್ರಣಾಳಿಕೆ : ಹೆಂಗಸರಿಗೆ ವಾರ್ಷಿಕ ಒಂದು ಲಕ್ಷ ರೂಪಾಯಿ

ಒಂದು ಲಕ್ಷ ಸಿಗುತ್ತಿದ್ದ ಹಾಗೆ ಸಾಲ ತೀರಿಸುತ್ತೇನೆ ಸಾರ್ ..!!!

● ಎಚ್.ಎಸ್. ವಿಶ್ವನಾಥ್

ತರ್ಲೆತಿಮ್ಮ



ದೇವನೊಲಿವನೆಂದು ಕಾಯುತಿರುವೆನು! ಚಿತ್ರದಲ್ಲಿರುವವರು, ದಿವ್ಯಾ

ಹೂವು ಅರಳದ ಲೋಕವಿದು!

● ಡಾ. ನವೀನ್ ಕುಮಾರ್ ಗು. ತಿಪ್ಪಾ

ಹೂವು ದಿನನಿತ್ಯ ಅರಳುತ್ತವೆ ಹಾಗೂ ಬಾಡುತ್ತವೆ. ಪ್ರಕೃತಿ ಮಾತೆಯ ಅಣತಿಯಂತೆ ತಮ್ಮ ದೈನಂದಿನ ಕಾರ್ಯ ಚಟಿವಟಿಕೆಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಲಿವೆ. ಹಾಗೆಯೇ ಕೂಡಾ ನಮ್ಮ ಅತ್ಯಮೂಲ್ಯವಾದ ಬದುಕು ಕೂಡಾ ನಿಸರ್ಗ ದತ್ತವಾಗಿ ವರದಾನವಾಗಿರುವದನ್ನು ಪ್ರಕೃತಿಯ ಮಾತೆಯ ಒಡಲಲ್ಲಿ ಆಸೆ-ದುರಾಸೆಗಳನ್ನು ಮಿತಿಯೊಂದಿಗೆ ಎಂದಿನಂತೆ ನಮ್ಮ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಪಾಲಿಸಬೇಕು.

ದುರದೃಷ್ಟಕರ ಸಂಗತಿಯೆಂದರೆ, ನಾವು ಅಭಿವೃದ್ಧಿ ಹಾಗೂ ಬೆಳವಣಿಗೆಯ ಹೆಸರಿನಲ್ಲಿ ಪ್ರಕೃತಿಯ ಅತ್ಯದ್ಭುತವಾದ ಸೌಂದರ್ಯವನ್ನು ಹಾಳು ಮಾಡುತ್ತಿದ್ದೇವೆ. ಪ್ರಕೃತಿ ಕೋಪಕ್ಕೆ ನಾವೇ ಆಹಾರವಾದರೆ ಖಂಡಿತ ತಪ್ಪೇನಿಲ್ಲ. ನೆಲ, ಜಲ, ಆಕಾಶ, ಭೂಮಿ, ಅಗ್ನಿ, ವಾಯು ಹೀಗೆ ಎಲ್ಲವನ್ನೂ ಒಳಗೊಂಡಿರುವುದನ್ನು ವರ್ಣಿಸಲು ಅಸಾಧ್ಯವಾದ ಒಂದು ಮಾಯೆ ಅಂದರೆ ಅದುವೇ, 'ಪ್ರಕೃತಿ' ಅಥವಾ 'ನಿಸರ್ಗ'.

ಇಂಥ ಪ್ರಕೃತಿಯಲ್ಲಿ ದಿನ ಬೆಳಗಾದರೆ ಬಗೆಬಗೆಯ ಸುಂದರವಾದ ಹೂಗಳು ದೈನಂದಿನ ಕಾರ್ಯವೆಂಬಂತೆ ಅರಳುತ್ತವೆ, ಹಾಗೂ ದಿನದ ಕೊನೆಗೆ ಬಾಡುತ್ತವೆ. ಆದರೆ, ನರಮಾನವನ ಒತ್ತಡದಲ್ಲಿ ಸಿಕ್ಕು ಮನಸ್ಸಿಲ್ಲದಿದ್ದರೆ ಬಾಹ್ಯ ಸೌಂದರ್ಯಕ್ಕಾಗಿ ಹೂ ಅರಳಬೇಕಾದ ಸ್ಥಿತಿ ನಿರ್ಮಾಣವಾಗತೊಡಗಿದೆ. ಹೂವಿನ ಮನಸ್ಸು ಎಷ್ಟೊಂದು ಸೂಕ್ಷ್ಮ. ಸ್ವಲ್ಪವೇ ನೋವು ಮಾಡಿದರೆ, ಅದರ ಪರಿಣಾಮ ಅದು ಮುಂದೆ ಅರಳುವುದನ್ನೆ, ನಗುವುದನ್ನೆ ಮರೆತು ಬಿಡುತ್ತದೆ.

ಕಮರಿದ ಚಿಗುರು ಮನಸ್ಸು

'ಹೂವು ಅರಳದ ಲೋಕವಿದು' ಅಂದರೆ ಒತ್ತಡದಿಂದ ಕೂಡಿದ ಬದುಕಿನಲ್ಲಿ ಜೀವನವನ್ನು ನಡೆಸಬಹುದು, ನಡೆಸುತ್ತಿದ್ದೇವೆ. ಆದರೆ, ಅಂತರಂಗದಲ್ಲಿ ಸಂತೋಷದ ಕೊರತೆ ಎದ್ದು ಕಾಣುತ್ತಿರುತ್ತದೆ. ಹೂವು ಅರಳುತ್ತಿವೆ, ಅಂತರಂಗದ ಅರಿವು ಇಲ್ಲದೇ. ಹೂವು ಅರಳುತ್ತಿವೆ, ಅಂತರಾತ್ಮವನ್ನು ಮರೆತವರಂತೆ. ಹೂವು ಅರಳುತ್ತಿವೆ, ಒತ್ತಡದ ಬದುಕನ್ನು ಮರೆಯಲಿಕ್ಕೆ. ಹೂವು ಅರಳುತ್ತಿವೆ,

ನರಕಯಾತನೆ ಮರೆಯಲಿಕ್ಕೆ. ಹೂವು ಅರಳುತ್ತಿವೆ, ಆದರೆ ಹೂವಿನಂತೆ ಭಾವನೆಗಳು ಅಳುತ್ತಿವೆ. ಹೂವು ಅರಳುತ್ತಿವೆ, ಆದರೆ ಬದುಕಿನ ಜೀವನದ ಬಣ್ಣಗಳು ಮಾಸುತ್ತಲಿವೆ. ಹೂವು ಅರಳುತ್ತಿವೆ, ಆದರೆ ಚಿಗುರಬೇಕಾದ ಯುವ ಮನಸ್ಸುಗಳು ಕಮರುತ್ತವೆ.

ಪ್ರತಿರೂಪದ ಪ್ರತಿಬಿಂಬ

ಹೂವಿನಂಥ ಮನಸ್ಸು ಎಷ್ಟೊಂದು ಪ್ರತಿರೂಪದ ಬಿಂಬಗಳನ್ನು ಹೊಂದಿದೆ. ಪ್ರತಿಬಿಂಬದಲ್ಲಿಯೂ ಕೂಡಾ ವಿಧವಿಧವಾದ ಕಲ್ಪನಾಲೋಕವನ್ನು ಸೃಷ್ಟಿಸುವ ಶಕ್ತಿ ಸಾಮರ್ಥ್ಯ ಹೂ ದುಂಬಿಗೆ ಇದೆಯೆಂದರೆ, ಹೂವು ಎಷ್ಟೊಂದು ಪರಾಕ್ರಮಶಾಲಿಯಾಗಿರಬಹುದು. ಎಷ್ಟೇ ಗದ್ದಲರಲಿ, ಗೊಂದಲಗಳ ಗೂಡಿರಲಿ, ಜನದಟ್ಟಣೆಯ ಸಾಗರರಲಿ, ಮಳೆರಲಿ, ಚಳಿರಲಿ, ಬಿಸಿಲಿರಲಿ ಕೊನೆಗೆ ಏನೇ ಇದ್ದರೂ ಕೂಡಾ ಹೂನ ಸುಗಂಧದ ಪರಿಮಳವು ಎಲ್ಲವನ್ನು ದಾಟಿ ಹೋಗುವ ಮನೋ-ಸಾಮರ್ಥ್ಯವು ಬಹಳ ಗಟ್ಟಿಯಾಗಿದೆ ಎನ್ನುವುದು ಗೋಚರಿಸುತ್ತದೆ. ಇದಕ್ಕೆ ಸೂರ್ಯನ ಕಿರಣಗಳ ಶಕ್ತಿಯು ಕಾರಣವಾಗಿದೆ. ಸೂರ್ಯನ ದೈನಂದಿನ ಕಿರಣಗಳ ಶಾಖವು ಹೂವುಗಳ ಹುಟ್ಟು ಬೆಳವಣಿಗೆಗೆ ತಳಹದಿಯಾಗಿದೆ.

ದೈನಂದಿನ ಜೀವನದಲ್ಲಿ ಉತ್ಸಾಹದಿಂದ, ಹುಮ್ಮಸ್ಸಿನಿಂದ ಬಾಳಲು ಹೂವಿನ ಅಂತಃಕರಣ ಹಾಗೂ ಮನಸ್ಸಿನ ಮನಸ್ಥಿತಿಯು ಮೂಲವಾಗಿದೆ.

ಹೂವು ಅರಳುವ ಸುಮಧುರವಾದ ಪ್ರಾಕೃತಿಕ ಪ್ರಪಂಚದಲ್ಲಿ ಹೂವುಗಳ ಮೇಲೆ ಒತ್ತಡ ಹಾಕದೇ, ಅವುಗಳ ಸ್ವಾತಂತ್ರ್ಯವನ್ನು ಅನುಭವಿಸಲು, ಹಕ್ಕುಗಳನ್ನು ಆನಂದಿಸಲು ನಾವೆಲ್ಲರೂ ಕೂಡಾ ಹೂವುಗಳ ಗೌರವ, ಘನತೆ ಹಾಗೂ ಯೋಗ್ಯತೆಯನ್ನು ಗೌರವಿಸೋಣ ಎನ್ನುವ ಹೃದಯಾಳದ ಕೋರಿಕೆಯನ್ನು ನಿಮ್ಮ ಮನಸ್ಸಿನ ಸ್ವಂದಿಸುಕೆಗಾಗಿ ಪ್ರಸ್ತಾಪಿಸುತ್ತಲಿದ್ದೇನೆ.

ಅಮ್ಮನ ಲಾಲಿ ಹಾಡು

● ಶ್ರೀಮತಿ ಶೈನಾ ಶ್ರೀನಿವಾಸ್ ಶೆಟ್ಟಿ.

'ಅಮ್ಮ' ಎಂಬ ಎರಡಕ್ಷರದ ಬಗ್ಗೆ ಪದಗಳಲ್ಲಿ ವರ್ಣಿಸಲಾಗದು. ಅಮ್ಮನ ಪ್ರೀತಿ ,ಅಕ್ಕರೆ ,ತಾಳ್ಮೆ ಕಾಳಜಿಯನ್ನು ಬೇರಾರಿಂದ ಕೊಡಲು ಸಾಧ್ಯವಿಲ್ಲ . ಅವಳಿಗೆ ಅವಳೇ ಸಾಟಿ . 'ದುಡ್ಡು ಕೊಟ್ಟರೆ ಬೇಕಾದ್ದು ಸಿಗುತ್ತೆತೇ ಈ ಜಗದೊಳು', ಎಂಬ ಜನಪದ ಹಾಡಿನ ಸಾಲಿನಂತೆ ಎಲ್ಲವೂ ಸಿಗುವ ಈ ಲೋಕದಲ್ಲಿ ತಾಯಿ ಮತ್ತು ತಾಯಿ ಪ್ರೀತಿ ಮಾತ್ರ ಕೋಟಿ ಕೊಟ್ಟರೂ ಸಿಗುವುದಿಲ್ಲ.

ಬಂಡೆ ಕಲ್ಲನ್ನು ಕೆತ್ತಿ ಸುಂದರವಾದ ಶಿಲ್ಪವನ್ನು ಮಾಡುವ ತಾಕತ್ತಿರುವುದು ಹೆತ್ತಮ್ಮನಿಗೆ ಮಾತ್ರ. ಅವಳ ಅದೆಷ್ಟೋ ರಾತ್ರಿಯ ನಿದ್ದೆಯನ್ನು ಕಸಿದುಕೊಂಡು, ಹೊಟ್ಟೆ ಬಟ್ಟೆ ಕಟ್ಟಿ ಸಾಕಿದ ಅವಳ ತ್ಯಾಗಕ್ಕೆ ಸರಿಸಮಾನವಾದದ್ದು ಯಾವುದೂ ಇಲ್ಲ. ಅವಳ ಪ್ರೀತಿಯ ಆಳವನ್ನು ಅರಿತವರಾರು ಇಲ್ಲ. ಲೋಕದ ಸಾಧಕರೆಲ್ಲರ ಸಾಧನೆಯ ಹಿಂದೆ ಅವರಮ್ಮನ ಪ್ರೀತಿಯ ಕಾಳಜಿ ,ಅಕ್ಕರೆಯ ಮಾತು, ಜವಾಬ್ದಾರಿಯ ಹಿತವಚನ , ಬದುಕಿನ ಪಾಠ ಇದ್ದೇ ಇದೆ.

ಈ ಎಲ್ಲ ವಿಚಾರಗಳನ್ನು ನಾಜೂಕಾಗಿ ತ್ರಿಪದಿಗಳಲ್ಲಿ ಪೋಣಿಸಿದ್ದಾರೆ ನಮ್ಮ ಜನಪದರು. ಮಗನೊಬ್ಬ ತನ್ನ ಹೆತ್ತಮ್ಮನ ಪ್ರೀತಿ, ಕಾಳಜಿಯನ್ನು ಹೀಗೆ ಮೆಲುಕು ಹಾಕುತ್ತಾನೆ.

ಮೊಲೆ ಹಾಲ ಕುಡಿಸಿದ್ದಿ ಕಲಸಕ್ರಿ ತಿನಿಸಿದ್ದಿ
ಬೆಳದಿಂಗ್ಳಿಗು ಮರಿಯ ಹಿಡಿದಿದ್ದಿ ಇ ನಿನ ಸೆರಗ
ಅಳುವುದೀಗೆಷ್ಟು ಹಡೆದವ್ವ॥

ಮೊಲೆ ಹಾಲು ಅಮೃತ ಸಮಾನವಾದದ್ದು. ಪುಟ್ಟ ಮಗುವಿಗೆ ಹಾಲೇ ಸಿಹಿ ಜೇನು. ರುಚಿಯಲ್ಲಿ ಸಕ್ಕರೆಯನ್ನೇ ಹೋಲಿದರೂ ಇದೊಂದು ಔಷಧೀಯ ರೂಪವಿರುವ ಸಿಹಿ. ಹಾಲು ಮತ್ತು ಕಲ್ಲು ಸಕ್ಕರೆ ಆರೋಗ್ಯವರ್ಧಕಗಳು. ಇವೆರಡನ್ನು ಕೊಟ್ಟು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಸಾಕಿದವಳು ಹೆತ್ತಮ್ಮ.

ತಾಯಿಯ ಪ್ರೀತಿಯ ಪರಾಕಾಷ್ಠತೆಯನ್ನು ಇದಕ್ಕಿಂತ ಚೆನ್ನಾಗಿ ಎಲ್ಲೂ ವರ್ಣಿಸಲಾಗದು. ನನ್ನ ಮಗ ಬೆಳದಿಂಗಳ ಕಿರಣದಿಂದ ಸೊರಗಬಾರದುಎಂದು ತನ್ನ ಸೆರಗನ್ನೇ ಅವನ ತಲೆಯ ಮೇಲೆ ಹಾಕುವ ಅಮ್ಮನ ಪ್ರೀತಿಗೆ ಬೇರೆ ನಿದರ್ಶನಗಳು ಬೇಕಿಲ್ಲ.

ಚಂದ್ರನ ಕಿರಣ ಸೋಕಿ ಕಂದನ ಮೊಗ ಬಾಡಬಾರದೆಂದು ಕಾಳಜಿವಹಿಸುವುದನ್ನು ನೋಡಿದರೆ ನಾವು ಹುಬ್ಬೇರಿಸದೇ ಇರೇವು. ಇಷ್ಟೆಲ್ಲ ಪ್ರೀತಿ ಕೊಡಲು ತಾಯಿಯೊಬ್ಬಳಿಗೆ ಮಾತ್ರ ಸಾಧ್ಯ ಎಂದು ಗೊತ್ತಿರುವ ಮಗ ಇಂದು ನೊಂದುಕೊಳ್ಳುತ್ತಿದ್ದಾನೆ. ಏಕೆಂದರೆ ಈಗ ಅವನ ಬಳಿ ತಾಯಿ ಇಲ್ಲ. ಕಾಲ ಮಿಂಚಿಹೋಗಿದೆ. ಜನಪದ ಹಾಡುಗಳು ಬಂದ ಸಮಯದಲ್ಲಿ ವೃದ್ಧಾಶ್ರಮದ ಕಲ್ಪನೆ ಇಲ್ಲದಿದ್ದರೂ ಈಗೀನ ಪ್ರಸ್ತುತ ಸ್ಥಿತಿಗೆ ಈ ರೀತಿ ಅರ್ಥೈಸಬಹುದಾಗಿದೆ.

ಆಶ್ರಮದ ಯಾವುದೋ ಒಂದು ಕೋಣೆಯಲ್ಲಿ ಸ್ಥಿತಪ್ರಜ್ಞೆಯಾಗಿ ಕೂತು ತನ್ನ ಮಗನ ಬಾಲ್ಯದ ತುಂಟಾಟ, ಚೇಷ್ಟೆಯ ಆಟಗಳು, ಅವನ ತೊದಲು ನುಡಿಗಳನ್ನು ಮೆಲುಕು ಹಾಕಿ ತನ್ನಷ್ಟಕ್ಕೆ ತಾನು ನಗುವ ತಾಯಂದಿರಿರುವ ಪುಣ್ಯ ಭೂಮಿ ನಮ್ಮದು.

ನನ್ನ ಮಗ ಎಲ್ಲೇ ಇದ್ದರೂ ನೂರು ಕಾಲ ಸುಖವಾಗಿ ಸಂಸಾರ ಮಾಡಿಕೊಂಡು ಸುಖ ಜೀವನ ನಡೆಸಲೆಂದು ಹಾರೈಸುವ ಇಂತಹಾ ಮಹಾತಾಯಿಯನ್ನು ಅಕ್ಷರದಲ್ಲಿ ಕಟ್ಟಿಹಾಕಲು ಸಾಧ್ಯವೇ?

ವಿಟಾಕೀಸ್

ಈವಾರ ಒ2 ದರ್ಶನ

ಪಿ.ಆರ್.ಕೆ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಒ2 ಚಿತ್ರ ತೆರೆಗೆ ಬರಲು ಸಿದ್ದವಾಗಿದ್ದು, ಮುಂದಿನ ವಾರ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಇದು ಪುನೀತ್ ರಾಜಕುಮಾರ್ ಅವರು ಕೇಳಿ ಮೆಚ್ಚಿಕೊಂಡ ಕೊನೆಯ ಸಿನಿಮಾದ ಕಥೆಯಾಗಿದೆ. ಇದೊಂದು ಔಷಧ ಆವಿಷ್ಕಾರದ ಕುರಿತ ಸಿನಿಮಾವಾಗಿದ್ದು, ಸಾಮಾಜಿಕ ಸಂದೇಶ ಸಾರುವ ಕಥೆಯೂ ಚಿತ್ರದಲ್ಲಿದೆ. ಲವ್, ಸೆಂಟಿಮೆಂಟ್ ಥ್ರಿಲ್ಲರ್ ಅಂಶಗಳು ಚಿತ್ರದ ಕಥೆಯಲ್ಲಿವೆ. ಈ ಚಿತ್ರವನ್ನು ಪ್ರಶಾಂತ್ ರಾಜ್ ಹಾಗೂ ರಾಘವ್ ನಾಯಕ್ ಜಂಟಿಯಾಗಿ ನಿರ್ದೇಶಿಸಿದ್ದಾರೆ. ರಾಘವ್ ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದಾರೆ. ಪ್ರವೀಣ್ ತೇಜ್ ನಾಯಕನಾಗಿ ನಟಿಸಿದ್ದು, ಎನ್ ಆರ್ಐ ವೈದ್ಯನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆಶಿಕಾ ರಂಗನಾಥ್ ನಾಯಕಿಯಾಗಿ ಬಣ್ಣಹಚ್ಚಿದ್ದು, ವೈದ್ಯಕೀಯ ಸಂಶೋಧನಾ ವಿದ್ಯಾರ್ಥಿಯಾಗಿ ಅಭಿನಯಿಸಿದ್ದಾರೆ. ಇದು ಆಶಿಕಾಗೆ ಬಿಗ್ ಬ್ರೇಕ್ ನೀಡುವ ನಿರೀಕ್ಷೆಯೂ ಇದೆ. ಸಿರಿ ರವಿಕುಮಾರ್, ಪ್ರಕಾಶ್ ಬೆಳವಾಡಿ, ಪುನೀತ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಚಿತ್ರದ ಹಾಡುಗಳು ಮಧುರವಾಗಿ ಮೂಡಿಬಂದಿದ್ದು, ವಿವಾನ್ ರಾಧಾಕೃಷ್ಣ ಸಂಗೀತ ಸಂಯೋಜಿಸಿದ್ದಾರೆ. ನವೀನ್ ಕುಮಾರ್ ಛಾಯಾಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ ಈ ಚಿತ್ರಕ್ಕಿದೆ.

> ನಾನು ಹಾಗೂ ಅಪ್ಪು ಅವರು ಒಟ್ಟಿಗೆ ಈ ಕಥೆ ಕೇಳಿದ್ದೆವು. ಇದು ಅಪ್ಪು ಅವರು ಕೇಳಿದ ಕೊನೆಯ ಕಥೆಯಾಗಿದೆ. ಒ2 ಒಳ್ಳೆಯ ಕಂಟೆಂಟ್ ಜತೆಗೆ ಸಂದೇಶವನ್ನು ಸಾರಲಿದೆ. ಚಿತ್ರದ ಹಾಡು ಹಾಗೂ ಕ್ಲೈಮ್ಯಾಕ್ಸ್ ನನಗೆ ಬಹಳ ಇಷ್ಟವಾಯಿತು. ಸದ್ಯ ಚಿತ್ರ ಬಿಡುಗಡೆಗೆ ಸಿದ್ದವಾಗಿದೆ.
> -ಅಶ್ವಿನಿ ಪುನೀತ್ ರಾಜಕುಮಾರ್ ನಿರ್ಮಾಪಕಿ

> ಒ2, ಔಷಧಿ ಆವಿಷ್ಕಾರದ ಕುರಿತ ಸಿನಿಮಾವಾಗಿದೆ. ಹೃದಯ ಸ್ತಂಭನವಾಗಿ ಸಾವಿನಂಚಿಗೆ ತಲುಪಿದ ವ್ಯಕ್ತಿಯನ್ನು ಒ2 ಡ್ರಗ್ ಮೂಲಕ ಬದುಕಿಸಬಹುದು, ಅದು ಹೇಗೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ.
> -ಪ್ರಶಾಂತ್ ರಾಜ್ ನಿರ್ದೇಶಕ

ಟಾಲಿವುಡ್ ಅಂಗಳದಲ್ಲಿ ಲೀಲಾ

ಪಾಪ್‌ಕಾರ್ನ್ ಮಂಕಿ ಟೈಗರ್ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿಕೊಟ್ಟ ನಟಿ ಸಪ್ತಮಿ ಗೌಡ, ಕಾಂತಾರ ಚಿತ್ರದಲ್ಲಿಯೂ ನಟಿಸಿ ಪ್ರಸಿದ್ಧಿ ಪಡೆದರು. ಈ ಚಿತ್ರದಲ್ಲಿ ಲೀಲಾಳಾಗಿ ಸಿನಿಪ್ರಿಯರ ಮನಗೆದ್ದರು. ಕಾಂತಾರ ಬಳಿಕ ಬಾಲಿವುಡ್‌ನ ವ್ಯಾಕ್ಸಿನ್ ವಾರ್ ಚಿತ್ರದಲ್ಲಿ ಸೈಟಿಂಸ್ಟ್ ಪಾತ್ರದಲ್ಲಿ ಅಭಿನಯಿಸಿ ಮನಸೂರೆಗೊಂಡರು. ಇತ್ತೀಚೆಗೆ ತೆರೆಗೆ ಬಂದ ಯುವ ಚಿತ್ರದಲ್ಲಿ ಕಾಲೇಜು ಹುಡುಗಿಯಾಗಿ ಹುಲಿ ಕುಳಿತದ ಮೂಲಕ ಮನಗೆದ್ದರು. ಹೀಗೆ ಚಂದನವನದಲ್ಲಿ ಪ್ರಸಿದ್ಧಿ ಪಡೆದಿರುವ ಸಪ್ತಮಿ, ಈಗ ಟಾಲಿವುಡ್‌ಗೂ ಹಾರಿದ್ದಾರೆ. ಹೌದು, ತೆಲುಗು ನಟ ನಿತಿನ್ ಅಭಿನಯಿಸುತ್ತಿರುವ ಹೊಸ ಚಿತ್ರದಲ್ಲಿ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ.

ಇದೊಂದು ಲವ್, ಆ್ಯಕ್ಷನ್ ಸಿನಿಮಾವಾಗಿದ್ದು ಚಿತ್ರೀಕರಣ ಕೂಡ ಆರಂಭವಾಗಿದೆ. ಚಿತ್ರಕ್ಕಾಗಿ ಹೈದರಾಬಾದ್‌ನಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ. ಇನ್ನೇನು ಸಪ್ತಮಿ ಕೂಡ ಚಿತ್ರತಂಡ ಸೇರಲಿದ್ದಾರೆ. ವಿಶೇಷ ಎಂದರೆ ಲೀಲಾ ಈ ಚಿತ್ರಕ್ಕಾಗಿ ಕುದುರೆ ಸವಾರಿಯನ್ನು ಕಲಿಯುತ್ತಿದ್ದಾರೆ.

ಇದನ್ನು ಗಮನಿಸಿದರೆ ಒಂದಷ್ಟು ಆ್ಯಕ್ಷನ್ ದೃಶ್ಯಗಳಲ್ಲಿಯೂ ಕಾಣಿಸಿಕೊಳ್ಳಬಹುದು ಎನ್ನಲಾಗುತ್ತಿದೆ. ಸಪ್ತಮಿ ಒಂದು ಚಿತ್ರಕ್ಕಿಂತ ಮತ್ತೊಂದು ಚಿತ್ರದಲ್ಲಿ ವಿಭಿನ್ನ ಪಾತ್ರದಲ್ಲಿ ಅಭಿನಯಿಸುತ್ತಾರೆ, ಒಬ್ಬ ಕಲಾವಿದೆಯಾಗಿ ಚಾಲೆಂಜಿಂಗ್ ಪಾತ್ರದಲ್ಲಿ ಅಭಿನಯಿಸುವ ಆಸೆ ನನಗಿದೆ, ಹಾಗಾಗಿ ಭಿನ್ನ ಪಾತ್ರಗಳನ್ನು ಆಯ್ದುಕೊಳ್ಳುತ್ತಿದ್ದೇನೆ ಎನ್ನುತ್ತಾರೆ ಸಪ್ತಮಿ. ಕನ್ನಡದಲ್ಲಿ ಹಲವು ಕಥೆಗಳನ್ನು ಕೇಳಿ ಮೆಚ್ಚಿರುವ ಲೀಲಾ ಕೆಲವು ಚಿತ್ರಗಳಲ್ಲಿ ನಟಿಸಲು ಸಮ್ಮತಿಸಿದ್ದಾರೆ, ಶೀಘ್ರದಲ್ಲಿಯೇ ಆ ಚಿತ್ರಗಳ ಶೂಟಿಂಗ್ ಆರಂಭವಾಗಲಿದೆ.

ಮೇನಲ್ಲಿ ಭೂ ಮಂತರ್

ಕಾಮಿಡಿ ಕಿಂಗ್ ಶರಣ್ ಅಭಿನಯದ ಅವತಾರ ಪುರುಷ 2 ಚಿತ್ರ ಅಷ್ಟಾಗಿ ಸದ್ದು ಮಾಡಲಿಲ್ಲಿ. ಶರಣ್ ನಾಯಕನಾಗಿ ನಟಿಸಿದ್ದರೂ, ಅಲ್ಲಿ ಕಾಮಿಡಿ ಇರಲಿಲ್ಲ. ಇದರಿಂದ ಅಭಿಮಾನಿಗಳು ಬೇಸರಗೊಂಡಿದ್ದಾರೆ. ಹೀಗಿರುವಾಗಲೇ ಶರಣ್ ಕಡೆಯಿಂದ ಸಿನಿಪ್ರಿಯರಿಗೆ ಸಿಹಿ ಸುದ್ದಿ ಸಿಕ್ಕಿದೆ. ಹೌದು ಶರಣ್ ಅಭಿನಯದ ಭೂಮಂತರ್ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಮೇ10 ರಂದ